A.—**Sri Kadidal MANJAPPA** (Minister for Revenue and Public Works).—

(*a*) Terms are indicated in the 1924 Agreement between Government of Mysore and Madras. Copy of printed agreement is placed on the Table.

(Copy placed in the library of the Legislature, *vide* No. 14—L. A. 52).

(*b*) During February 1924.

(*c*) and (*d*) This question is under active consideration of Government.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೈಸೂರು ದೇಶಕ್ಕೆ ಕಾವೇರಿ ನದಿಯ ನೀರನ್ನು ಕನ್ನಂಬಾಡಿ ಕಟ್ಟೆಯಿಂದ ಮದ್ರಾಸಿಗೆ ಎಷ್ಟು ಕೊಡಬೇಕು ?

Sri Kadidal MANJAPPA.—That is in pursuance of the agreement. A copy of the agreement is placed on the table.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಗ್ರಿಮೆಂಟ್ ಕಾಪಿ ನನಗಿನ್ನೂ ಸಿಕ್ಕಿಲ್ಲ.

Sri Kadidal MANJAPPA.—It involves too many details ; they are all incorporated in the agreement itself.

Sri. L. SIDDAPPA.—(Channagiri) It is complicated too.

Sri Kadidal MANJAPPA.—Yes, complicated too.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಒಂದು ದಿವಸಕ್ಕೆ ಎಷ್ಟು ಕ್ಯೂಬಿಕ್ ಫುಟ್ ವಾಟರ್‌ನ್ನು ಮದ್ರಾಸಿಗೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಗ್ರಿಮೆಂಟ್ ಒಂದು ಸಾರಿ ಓದಿದ್ದೆ. ಜ್ಞಾಪಕವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೊನ್ನೆ ಕ್ಷಾಮ ಬಂದಾಗ ನೀವು ನೀರನ್ನು ನಿಲ್ಲಿಸಿದ್ದಿರೋ ?

ಶ್ರೀ ಕಡಿದಾಳ್ ಮಂಜಪ್ಪ.—ಮದ್ರಾಸ್ ಸರ್ಕಾರದವರಿಗೆ ಬರೆದು ಅನಂತರ ನೀರನ್ನು ಕೆಲವು ಕಾಲ ನಿಲ್ಲಿಸಿದ್ದೆವು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ಮೇರೆ ನೀರನ್ನು ಬಿಟ್ಟಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೀರನ್ನು ಬಿಟ್ಟಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ವಿಷಯದಲ್ಲಿ ಯಾರಾದರೂ intervene ಮಾಡಿದರೇ ?

Mr. SPEAKER.—That question has been disallowed.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮೊನ್ನೆ ನೀರು ಬಿಟ್ಟಾಗ ಇಂಡಿಯಾ ಸರ್ಕಾರದವರು intervene ಮಾಡಿದರೆ !

ಅಧ್ಯಕ್ಷರು.—ಆ ಪ್ರಶ್ನೆಯನ್ನು ತಳ್ಳಿ ಹಾಕಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ನಮ್ಮ ದೇಶಕ್ಕೆ ಈ ಅಗ್ರಿಮೆಂಟಿನಿಂದ ಬಹಳ ಅನ್ಯಾಯವಾಗುತ್ತಿದೆ ಎಂದು ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದಷ್ಟು ಜಾಗ್ರತೆ ಈ ಅಗ್ರಿಮೆಂಟನ್ನು ಕಿತ್ತುಹಾಕುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—"This question is under the active consideration of Government." ಎಂದು ಆಗಲೇ ಉತ್ತರ ಕೊಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮದ್ರಾಸ್ ಸರ್ಕಾರದವರು ಉತ್ತರ ಪಿನಾಕಿನಿ ಮುಂತಾದ ಕಡೆಗಳಲ್ಲಿ ಈ ಅಗ್ರಿಮೆಂಟನ್ನು ಮೀರಿ ನಡೆದದ್ದರಿಂದ, ಇದನ್ನು ಜಾಗ್ರತೆ ಪುನರ್ವಿಮರ್ಶೆಮಾಡುವುದು ಒಳ್ಳೆಯದಲ್ಲವೇ ? ಹಾಗೆ ಮದ್ರಾಸ್ ಸರ್ಕಾರದವರು ಅಗ್ರಿಮೆಂಟ್ violate ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಆದ್ದರಿಂದ ಈ ಅಗ್ರಿಮೆಂಟನ್ನು ಜಾಗ್ರತೆ ಪುನರ್ವಿಮರ್ಶೆಮಾಡುವುದು ಒಳ್ಳೆಯದಲ್ಲವೇ ?

Sri Kadidal MANJAPPA.—That is why the agreement is under the active consideation of Government.

ಶ್ರೀ ಬಿ. ಹುಚ್ಚೇಗೌಡ.—ಭದ್ರಾನದಿಯ ನೀರಿನ ವಿಚಾರದಲ್ಲಿ ಹೇಗೆ ನಮಗೆ ನಿಗದಿಯಾಗಿ ಬೇಕಾದ ನೀರನ್ನು ಇಟ್ಟುಕೊಂಡು ಬಾಕಿ ನೀರನ್ನು ಬೇರೆಯವರು ತೆಗೆದುಕೊಳ್ಳಬಹುದೆಂದು ಒಂದು ಏರ್ಪಾಟನ್ನು ಮಾಡಿಕೊಂಡಿದ್ದೇವೆಯೋ ಅದೇ ರೀತಿ ಇಲ್ಲಿಯೂ ಕೂಡ ನಿಗದಿಯಾದ ನೀರನ್ನು ನಾವು ಇಟ್ಟುಕೊಂಡು ಬಾಕಿ ನೀರನ್ನು ಅವರು ತೆಗೆದುಕೊಳ್ಳಬಹುದು ಎಂಬ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ!

Sri Kadidal MANJAPPA.—All these things are under the active consideration of Government.

Sri B. V. NARAYANA REDDY (Bagepalli—Gudibanda).—Has it come to the notice of the Government that the Government of Madras have been violating certain other agreements in several respects ?

Sri Kadidal MANJAPPA.—Yes, in some cases.

Sri B. V. NARAYANA REDDY.—In that case, why not we also violate this agreement ?

(No answer).

Measures to redeem raiyats from debts.

Q.—478. **Srimathi B. L. SUBBAMMA** (Chickmagalur-Mudigere).—

Will the Government be pleased to state :—

(*a*) whether they have taken any measures for the redemption of debts of raiyats ;

(*b*) what they are ;

(*c*) whether a survey of indebtedness has been carried out ?

A.—**Sri Kadidal MANJAPPA** (Minister for Revenue and Public Works).—

(*a*) and (*b*) (1) The following enactments were passed from time to time to check the increase of indebtedness by controlling the interest rate on loans, preventing the exploitation of agriculturists and for settling their debts amicably :—

(i) Money Lenders' Act of 1939.

(ii) Agriculturists' Relief Act of 1928.

(iii) Debt Conciliation Boards Act of 1937. The raiyats have however not availed themselves fully of the opportunities afforded by this Act with the result that the Boards established under the Act were later abolished.

(2) Cheap Credit and the Land Mortgage Bank and other Co-operative Societies established in the State is also affording relief to agriculturists.

(3) In addition, Government have been granting financial assistance to the raiyats directly by the grant of subsidies for sinking irrigation wells, takavi and land improvement loans through the Revenue Department to enable them to secure better income by effecting improvements to their lands.

(4) It may be added that having due regard to the high prices obtaining for agricultural commodities for the last 5 or 6 years, the raiyats are economically in a better position to pay off their debts to a certain extent out of the increment in the value of agricultural produce.

(*c*) Yes, in 1941 and 1945.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರೈತರ ಋಣ ಪರಿಹಾರಕ್ಕಾಗಿ, ರೇವಾದೇವಿ ಮಾಡತಕ್ಕವರಿಗೆ ಸಂಬಂಧಪಟ್ಟ 1939ನೇ ಇಸವಿಯ ಆಕ್ಟ್ ಮತ್ತು ವ್ಯವಸಾಯಗಾರರ ಸಹಾಯಾರ್ಥವಾದ 1928ನೆಯ ಇಸವಿಯ ಆಕ್ಟ್ ಮುಂತಾದ ಕಾನೂನುಗಳನ್ನು ಮಾಡಿದ್ದೀರಿ ಎಂದು ಹೇಳಿದ್ದೀರಿ. ಈ ಕಾನೂನುಗಳಿಂದ ರೈತರ ಋಣಬಾಧೆ ಪರಿಹಾರವಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪಮಟ್ಟಿಗೆ ಆಗುತ್ತದೆ. ವ್ಯವಸಾಯಗಾರರು ಸಾಲಮಾಡಿದರೆ, ಸಾಲ ಕೊಟ್ಟವರು ಕೋರ್ಟಿಗೆ ಹೋದರೆ, ಕಂತಿನಲ್ಲಿ ಸಾಲವನ್ನು ಕೊಡುವುದಕ್ಕೆ ಅವಕಾಶವಿದೆ. Debt Conciliation Boards Act ಪ್ರಕಾರ ಅರ್ಜಿಹಾಕಿದರೆ, ಅದನ್ನು ಪಂಚಾಯಿತಿ ಮುಖಾಂತರ ತೀರ್ಮಾನ ಮಾಡುವುದಕ್ಕೆ ಅವಕಾಶವಿದೆ. ಹಾಗೆಯೇ Money Lenders' Act ಮೂಲಕ ರಿಯಾಯಿತಿಗಳನ್ನು ದೊರಕಿಸಿಕೊಳ್ಳಬಹುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಕಾನೂನುಗಳಿಂದ ಶೇಕಡ ಎಷ್ಟು ಭಾಗ ಋಣ ಪರಿಹಾರವಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಕರಾರುಪಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಕಾನೂನುಗಳಿಂದ ಉಪಯೋಗವಾಗುತ್ತಿಲ್ಲ. ಈ ಕಾನೂನುಗಳು ಇವೆ ಎಂಬುದೇ ಅನೇಕ ರೈತರಿಗೆ ಗೊತ್ತಿಲ್ಲದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕಾನೂನುಗಳು ಇವೆ ಎಂಬುದು ಅನೇಕ ರೈತರಿಗೆ ಗೊತ್ತಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಬೊಂಬಾಯಿ ಸರ್ಕಾರದವರು ರೈತರ ಬ್ಯಾಂಕನ್ನು ಪ್ರಾರಂಭ ಮಾಡಿದ ಹಾಗೇನಾದರೂ ಇಲ್ಲಿಯೂ ಮಾಡಬೇಕೆಂದು ನಮ್ಮ ಸರ್ಕಾರಕ್ಕೆ ಅಭಿಪ್ರಾಯವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡಬೇಕು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಜಪಾನು ಅಡಮಾನವ ಬ್ಯಾಂಕುಗಳಿಂದ ಸಾಲ ದೊರೆಯಲು, ಖಾತೆಯಲ್ಲಿ ಹೆಸರು ಬದಲಾಯಿಸಬೇಕಾದರೆ, ಒಂದು ವರ್ಷ ಬೇಕಾಗುತ್ತದೆ ಎಂಬುದು ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ನಿಧಾನವಾಗುತ್ತದೆ.

ಶ್ರೀ ಬಿ. ಎಲ್. ಸುಬ್ಬಮ್ಮ.—ಅವರು ಆಬಾದಿನ ಖರ್ಚಿಗೆ ಮಾತ್ರ ಹಣ ಕೊಡುತ್ತಾರೆ, ಋಣ ಪರಿಹಾರಕ್ಕೆ ಅಲ್ಲ ಎಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಹಣವನ್ನೂ ಋಣ ಪರಿಹಾರಕ್ಕೋಸ್ಕರವೇ ಕೊಡುತ್ತಾರೆ.

ಶ್ರೀ ಬಿ. ಎಲ್. ಸುಬ್ಬಮ್ಮ.—ಮುಂದೆ ಸಾಲ ಕೊಡುವುದಕ್ಕೆ ಅವರು ಏನು ಮಾಡಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥವರಿಗೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—1941 ಮತ್ತು 1945ರಲ್ಲಿ ಮಾಡಿರುವ ಸರ್ವೆಯ ಪ್ರಕಾರ ರೈತರ ಸಾಲದ ಹೊರೆ ಎಷ್ಟಿದೆ ಎಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿ.—ತಕಾವಿ ಸಾಲ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲಗಳು ಎಷ್ಟು ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದಮಟ್ಟಿಗೆ ಕೊಟ್ಟಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಂದ ಮೇಲೆ ಹೇಳಿದ ಎರಡು ಬಾಬುಗಳಿಗೆ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿಗಳ ವಿವರಗಳನ್ನು ತಿಳಿಸಲು ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಷ್ಟು ಮೊಬಲಗಿಗೆ ಅರ್ಜಿಗಳು ಬಂದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಎಷ್ಟು ಕೊಟ್ಟಿದ್ದೇವೆ ಎಂದು ಹೇಳಬಹುದು; ಅರ್ಜಿಗಳು ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನೆಯ ನಿರ್ಣಯದ ಮೇಲೆ ಚರ್ಚೆಯಾಗಬಹುದು. ಆ ಸಮಯದಲ್ಲಿ ಈ ವಿವರವನ್ನು ಕೊಡುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಯಳಂದೂರು).—Debt Conciliation Board ಜೀವಂತವಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಜೀವಂತವಾಗಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—Debt Conciliation Boardಗೆ ಇದುವರೆಗೆ ಎಷ್ಟು ಅರ್ಜಿಗಳು ಬಂದಿವೆ? ಎಷ್ಟು ಅರ್ಜಿಗಳು ತೀರ್ಮಾನವಾಗಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಆರ್. ಅನಂತರಾವನ್ (ಚಾಮರಾಜಪೇಟೆ).—ರೈತರ ಸಾಲವನ್ನು ಪೂರ್ತಿಯಾಗಿ ವಜಾಮಾಡುವುದಕ್ಕೆ ಏನು ಮನೂವೆ ತರುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸಭೆ ಅಂಥ ಮನೂದೆಗೆ ಅಂಗೀಕಾರ ಕೊಟ್ಟರೆ, I will be the most happy person.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಚಿಕ್ಕಮಗಳೂರು ಜಿಲ್ಲೆಯಿಂದ ಜಮೀನಿನ ಮೇಲೆ ಸಾಲ ಕೊಡಬೇಕೆಂದು ಲಕ್ಷಾಂತರ ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ. ಎರಡು ವರ್ಷಗಳ ಲಾಗಾಯ್ತು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾರಿಗೂ ಸಾಲ ಕೊಟ್ಟಿಲ್ಲ ಎಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ದೊಡ್ಡದೊಡ್ಡ ರೈತರಿಗೆ ಸಿಕ್ಕುತ್ತಿದೆಯೇ ಹೊರತು ಸಣ್ಣಪುಟ್ಟ ರೈತರಿಗೆ ಯಾವ ರೀತಿಯ ಪರಿಹಾರವೂ ದೊರೆಯುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಸಣ್ಣಪುಟ್ಟ ರೈತರಿಗೂ ಸಿಕ್ಕುತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಆದರೂ ಅವರಿಗೂ ಇವರಿಗೂ ಹೋಲಿಸಿದರೆ ಸಣ್ಣಪುಟ್ಟ ರೈತರಿಗೆ ಸಿಕ್ಕುವುದು ಅತ್ಯಲ್ಪವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿರುವವರಿಗೆ ಸಿಕ್ಕುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಸಾಲಗಾರರಾಗಿರುವವರು ಹೆಚ್ಚು ಜಮೀನಿಲ್ಲದ ಸಣ್ಣಪುಟ್ಟ ರೈತರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ದೊಡ್ಡವರೂ ಕೆಲವರು ಸಾಲಮಾಡಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ನಮ್ಮ ದೇಶ ಬಡ ಜನರ ದೇಶವಾದುದರಿಂದ ಸಣ್ಣಪುಟ್ಟ ರೈತರಿಗೆ ಸಾಲ ದೊರೆಯಬೇಕೆಂಬ ಘನವಾದ ಉದ್ದೇಶದಿಂದಲ್ಲವೆ ಸರ್ಕಾರ ಇದನ್ನೆಲ್ಲಾ ಮಾಡಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಯು. ಎಂ ಮಾದಪ್ಪ.—ಸಣ್ಣಪುಟ್ಟ ರೈತರಿಗೆ ಸುಲಭವಾಗಿ ಮುಂದೆ ಸಾಲ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೂ ಅವರಿಗೆ ದೊರೆಯುತ್ತಿದೆ.

Expenditure on relief works met out of Famine Relief Fund.

Q.—518. **Sri B. N. BORANNA GOWDA** (Belur).—

Will the Government be pleased to state :—

(*a*) the amount expended from out of the Famine Relief Fund on relief works that were undertaken owing to the failure of rains in 1951-52 (details to be furnished districtwar) ;

(*b*) whether one-fourth portion of the amount has been collected from the atchkatdars of the tanks upon which the money has now been spent;

(*c*) whether it is a fact that the Revenue Commissioner urged at the Deputy Commissioners' Meeting for strict recovery of this one-fourth portion in connection with the desilting of tanks ;

(*d*) whether an agreement has been got executed from the raiyats for the payment of one-fourth portion of the amount in connection with the desilting work carried out since the last four years ?

A.—**Sri Kadidal MANJAPPA** (Minister for Revenue and Public Works).—

(*a*)

District.		*Amount spent on Relief Works.* Rs. a. p.
1. Kolar	...	75,980 3 1
2. Chitaldrug	...	15,374 0 0
3. Tumkur	...	3,165 4 0

(*b*) As far as desilting of tanks taken up under the Distress Relief Programme is concerned, no portion of the amount spent on them out of Famine Reserve Funds has been recovered from the atchkatdars.

(*c*) and (*d*) This question does not arise in view of reply to (*b*).

ಶ್ರೀ ಬಿ. ಎನ್. ಬೋರಣ್ಣಗೌಡ.—ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಈ ಮೂರು ಡಿಸ್ಟ್ರಿಕ್ಟುಗಳಲ್ಲಿ ಖರ್ಚು ಮಾಡಿರುವುದು ಈ ಉತ್ತರದಲ್ಲಿದೆ; ಬಾಕಿ ಡಿಸ್ಟ್ರಿಕ್ಟುಗಳಿಗೆಷ್ಟು ಖರ್ಚುಮಾಡಿದೆ?

ಶ್ರೀ ಕಡಿದಾಳ್ ಮಂಜಪ್ಪ.—1951-52 ರಲ್ಲಿ ಈ ಮೂರು ಜಿಲ್ಲೆಗಳಿಗೆ ಖರ್ಚುಮಾಡಿದೆ.